ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

ಸಾಕ್ಷಿಗೆ ದಿನಾಂಕಃ **07-02-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.778/2018
CW-1 PW-1

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಮಪ್ಪ ಸಿದ್ದಪ್ಪ ಚಿಗದನ್ನವರ |
| ವಯಸ್ಸು | - | 57 ವರ್ಷ |
| ಉದ್ಯೋಗ | - | ಕೂಲಿ |
| ಸಾಕೀನ | - | ಉಪ್ಪಾರಟ್ಟಿ |

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2017 ನೇ ಸಾಲಿನಲ್ಲಿ ಗೋಕಾಕಿನ ಅಂಚೆ ಇಲಾಖೆಯ ಗಾರ್ಡನಿನಲ್ಲಿ ಕೆಲಸ ಮಾಡುತಿದ್ದೆ. ನಾನು ನಮ್ಮೂರಿನಿಂದ ಪ್ರತಿ ದಿನ ಸೈಕಲ ಮೇಲಿಂದ ಗೋಕಾಕಿಗೆ ಬಂದು ಅಂಚೆ ಇಲಾಖೆಯ ಗಾರ್ಡನಿನಲ್ಲಿ ಕೆಲಸ ಮಾಡಿ ಪುನಃ ಸೈಕಲ ಮೇಲಿಂದ ನಮ್ಮೂರಿಗೆ ಹೋಗುತಿದ್ದೆ.

2017 ನೇ ಸಾಲಿನ ಡಿಸೆಂಬರ್ ತಿಂಗಳಿನಲ್ಲಿ ಒಂದು ದಿನ ನಾನು ನೀರಿನ ಬಿಲ್ಲು ತುಂಬಲು ಗೋಕಾಕಿನ ನಗರ ಸಭೆಗೆ ಸೈಕಲ ಮೇಲಿಂದ ಹೋಗುತಿದ್ದಾಗ ಜೆ ಎಸ್ ಎಸ್ ಕಾಲೇಜಿನ ಮೇನ್ ಗೇಟಿನ ಮುಂದಿನ ರಸ್ತೆಯಲ್ಲಿ ನಾನು ಹೋಗುತಿದ್ದಾಗ ನನ್ನ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ಸು ಬಂದು ನನಗೆ ಹಾಯಿಸಿರುತ್ತದೆ. ಸದರಿ ಅಪಘಾತ ಬೆಳಗ್ಗೆ 11.45 ಕ್ಕೆ ಆಗಿರುತ್ತದೆ. ಚಾಸಾ-5 ರವರು ನನ್ನನ್ನು ಗೋಕಾಕಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಸದರಿ ಅಪಘಾತದಿಂದ ನನ್ನ ತಲೆಯ ಎಡಭಾಗ, ಕಾಲು ಮತ್ತು ಭುಜಕ್ಕೆ ಭಾರಿ ಗಾಯವಾಗಿರುತ್ತದೆ. ನನಗೆ ಅಪಘಾತಪಡಿಸಿದ ಬಸ್ಸ ಚಾಲಕನ ಹೆಸರು ಶಿವಲಿಂಗ ಭೀಮಪ್ಪ ಹೊಸೂರ, ಸಾಃ ಸಾವಳಗಿ ಎಂದು ಗೊತ್ತಾಗಿರುತ್ತದೆ. ಈ ಘಟನೆಯ ಕುರಿತು ನಾನು ಪೊಲೀಸರಿಗೆ ನಿಮ್ರಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತಿದ್ದಾಗ ದೂರನ್ನು ನನ್ನ ಮಗ ಚಾಸಾ-6 ರವರ ಕಡೆಯಿಂದ ಬರೆಯಿಸಿ ನೀಡಿರುತ್ತೇನೆ.

ನಾನೀಗ ದೂರನ್ನು ನೋಡುತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯು ದೂರನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1-ಎ ಎಂದು ಗುರುತಿಸಲಾಯಿತು. ನಿಪಿ-1 ರ ದೂರು ಸಲ್ಲಿಸಲು ಆದ ವಿಳಂಬದ ಕುರಿತು ನಾನು ಪೊಲೀಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ ಬಿ ಎನ್ ರವರಿಂದಃ

1. ನಾನು 1983 ರಿಂದ 2017 ರ ವರೆಗೆ ಗೋಕಾಕಿನ ಅಂಚೆ ಇಲಾಖೆಯಲ್ಲಿ ಕಾರ್ಮಿಕನಾಗಿ ಗಾರ್ಡನ ಕೆಲಸ ಮಾಡಿಕೊಂಡಿದ್ದೆ. ಅಂಚೆ ಇಲಾಖೆಯವರು ನನಗೆ ದಿನಗೂಲಿ ಆಧಾರದ ಮೇಲೆ ಕೆಲಸ ನೀಡಿದ್ದರು. ನಾನು ಅಂಚೆ ಇಲಾಖೆಯಲ್ಲಿ ದಿನಗೂಲಿ ಕೆಲಸಗಾರನಾಗಿರುತ್ತೇನೆ ಎಂದು ದೂರಿನಲ್ಲಿ ಬರೆಸಿರುತ್ತೇನೆ. ಈ ದಿನ ನನ್ನ ಮಗ ನನಗೆ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾನೆ. ಕೆಎ-49-ಎಸ್-3163 ಇದು ನನ್ನ ಮೋಟಾರ ಸೈಕಲ ಎಂದರೆ ಸರಿ. ಸದರಿ ಮೋಟಾರ ಸೈಕಲ ಮೇಲಿಂದ ನಾನು 2017 ನೇ ಸಾಲಿನಲ್ಲಿ ಅಂಚೆ ಇಲಾಖೆಗೆ ಕೆಲಸ ಮಾಡಲು ಬರುತಿದ್ದೆ ಎಂದರೆ ಸರಿಯಲ್ಲ. 2017 ನೇ ಸಾಲಿನ ಡಿಸೆಂಬರ್ ತಿಂಗಳಿನ 18 ನೇ ತಾರೀಖಿನಂದು ಅಪಘಾತವಾಗಿರುತ್ತದೆ. ನಾನು ಪ್ರತಿ ದಿನ ಬೆಳಗ್ಗೆ 10.00 ಗಂಟೆಗೆ ಅಂಚೆ ಇಲಾಖೆಗೆ ಕೆಲಸಕ್ಕೆ ಬರುತಿದ್ದೆ. ಅಪಘಾತವಾಗಿದೆ ಎಂದು ಹೇಳುವ ದಿನದಂದು ನಾನು ಅಂಚೆ ಇಲಾಖೆಯಲ್ಲಿ ಅರ್ಧ ಗಂಟೆ ಕೆಲಸ ಮಾಡಿ ಬಿಲ್ಲು ತುಂಬಲು ನಗರಸಭೆಗೆ ಹೋಗುವ ಮಾರ್ಗ ಮಧ್ಯದಲ್ಲಿ ನನಗೆ ಅಪಘಾತವಾಗಿರುತ್ತದೆ. ಅಪಘಾತವಾಗಿದೆ ಎಂದು ಹೇಳುವ ಸ್ಥಳದಲ್ಲಿ ವಿಶಾಲವಾದ ರಸ್ತೆ ಇರುತ್ತದೆ ಎಂದರೆ ಸರಿ. ಅಪಘಾತವಾಗಿದೆ ಎಂದು ಹೇಳುವ ಸ್ಥಳ ಜನದಟ್ಟಣೆಯಿಂದ ಕೂಡಿದ ಸ್ಥಳ ಎಂದರೆ ಸರಿ. ಸದರಿ ಸ್ಥಳದಲ್ಲಿ ವಾಹನಗಳು ನಿಧಾನಗತಿಯಲ್ಲಿ ಹೋಗುತ್ತವೆ ಎಂದರೆ ಸರಿಯಲ್ಲ. ನಾನು ಮುಂದೆ ಮುಂದೆ ಹೋಗುತಿದ್ದಾಗ ನನ್ನ ಹಿಂದುಗಡೆಯಿಂದ ಒಂದು ಬಸ್ಸು ಬಂದು ನನಗೆ ಹಾಯಿಸಿರುತ್ತದೆ. ಸಾಮಾನ್ಯವಾಗಿ ಮುಂದುಗಡೆ ಹೋಗುವ ವ್ಯಕ್ತಿ ಹಿಂದೆ ಬರುವ ವಾಹನಗಳ ವೇಗದ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಅಪಘಾತ ಪಡಿಸಿದ ಬಸ್ಸಿನ ನಂಬರ್ ನನಗೆ ಈಗ ಹೇಳಲು ಆಗುವುದಿಲ್ಲ. ಅಪಘಾತಪಡಿಸಿದ ವಾಹನದ ನಂಬರ್ ನನಗೆ ಗೊತ್ತಿರುವುದಿಲ್ಲ. ನನ್ನ ಮಗ ಚಾಸಾ-6 ಮತ್ತು ಚಾಸಾ-5 ರವರು ಅಪಘಾತಪಡಿಸಿದ ವಾಹನದ ನಂಬರ್ ತಿಳಿಸಿರುತ್ತಾರೆ. ಅಪಘಾತಪಡಿಸಿದ ಬಸ್ಸು ಎಷ್ಟು ವೇಗದಲ್ಲಿ ಬರುತಿತ್ತು ನನಗೆ ಗೊತ್ತಿಲ್ಲ. ನನಗೆ ಅಪಘಾತವಾದ ನಂತರ ಸರ್ಕಾರಿ ಆಸ್ಪತ್ರೆಗೆ ಯಾರೋ ಸಾರ್ವಜನಿಕರು ಸೇರಿಸಿರುತ್ತಾರೆ. ನಂತರ ನನ್ನ ಮಗ ಹಾಗೂ ಚಾಸಾ-5 ರವರು ಬಂದು ನನ್ನನ್ನು ನಿಮ್ರಾ ಆಸ್ಪತ್ರೆಗೆ ಮಾರನೇ ದಿನ ದಾಖಲು ಮಾಡಿರುತ್ತಾರೆ. ಪೊಲೀಸರು ಮೊದಲು ಸರ್ಕಾರಿ ಆಸ್ಪತ್ರೆಗೆ ಬಂದು ನನ್ನಿಂದ ಹೇಳಿಕೆ ಪಡೆದುಕೊಂಡಿರುತ್ತಾರೆ. ನಂತರ ನಿಮ್ರಾ ಆಸ್ಪತ್ರೆಗೂ ಸಹ ಪೊಲೀಸರು ಬಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

2. ಮೊದಲು ನನ್ನಿಂದ ಪೊಲೀಸರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ದೂರು ಪಡೆದುಕೊಂಡಿರುತ್ತಾರೆ. ದೂರು ಬರೆಯಲು ಚಾಸಾ-6 ರವರು ಮಾಹಿತಿ ನೀಡಿರುತ್ತಾರೆ. ನಿಪಿ-1 ರ ದೂರಿನಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಸ್ವತಃ

ಮುಂದುವರೆದು ಆ ಸಮಯದಲ್ಲಿ ನನಗೆ ಜ್ಞಾನ ಇರಲಿಲ್ಲ ಎಂದು ನುಡಿಯುತ್ತಾರೆ. ಆಸ್ಪತ್ರೆಯ ಖರ್ಚನ್ನು ಯಾರು ಕೊಡುತ್ತಾರೆ ಎಂದು ತಿಳಿಸಿದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ಅಪಘಾತಪಡಿಸಿದ ಬಸ್ಸು ಅಪಘಾತಪಡಿಸಿ ಹೋಗಿರುತ್ತದೆ ಎಂದು ಸಾರ್ವಜನಿಕರು ನನಗೆ ತಿಳಿಸಿರುತ್ತಾರೆ. ಸಾವಳಗಿಯಿಂದ ಗೋಕಾಕಕ್ಕೆ ಖಾಯಂ ತರೀಖ ಒಂದೇ ಬಸ್ಸು ತಿರುಗಾಡುತ್ತದೆ ಎಂದರೆ ಸರಿ. ಆರೋಪಿ ನನಗೆ ಯಾವುದೇ ಅಪಘಾತ ಮಾಡದೇ ಇದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಮೊದಲ ಬಾರಿಗೆ ಈ ನ್ಯಾಯಾಲಯಕ್ಕೆ ಬಂದಾಗ ನೋಡಿರುತ್ತೇನೆ ಎಂದರೆ ಸರಿ. ನನಗೆ ಅಪಘಾತದಿಂದ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ಹೇಗಾದರೂ ಮಾಡಿ ಪರಿಹಾರ ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಆರೋಪಿಯ ಮೇಲೆ ಸುಳ್ಳು ಕತೆ ಕಟ್ಟಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಸೈಕಲ ಮೇಲೆ ಹೋಗುತ್ತಿರುವಾಗ ಆಯ ತಪ್ಪಿ ಬಿದ್ದು ಗಾಯ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಪಘಾತಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.